# ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಆಳಂದ.

ಸಿ.ಸಿ.ನಂಃ**284/2017** ಸಿ.ಡಬ್ಲ್ಯೂ –18 ಪಿ.ಡಬ್ಲೂ-೩

| | | |
|---|---|---|
| ಹೆಸರು | ಃ | ಭಾಗ್ಯಶ್ರೀ |
| ತಂದೆ/ಗಂಡ | ಃ | ಕಿಶೋರ ಇಂಗಳೇ |
| ವ ಯಸ್ಸು | ಃ | ೩೨ ವರ್ಷ |
| ಉದ್ಯೋಗ | : | ಮನೆಕೆಲಸ |
| ವಾಸಸ್ಥಳ | ಃ | ಕನಗರ, ಉಸ್ಮಾನಾಬಾದ |

ದಿನಾಂಕಃ೨೭.೧೨.೨೦೧೯

ಸತ್ಯ ಪ್ರತಿಜ್ಞೆಯ ಮೇರೆಗೆ

---

## ಮುಖ್ಯ ವಿಚಾರಣೆ ಮಾನ್ಯ ಸಸಅ ಅವರಿಂದಃ

ನನಗೆ ಚಾಸಾ-1, 17, 19 ರಿಂದ 22, 27, 28 ರವರ ಪರಿಚಯ ಇರುತ್ತದೆ. ಈ ಪ್ರಕರಣದಲ್ಲಿನ ಮೃತ 9 ಜನರ ಪರಿಚಯ ಇರುತ್ತದೆ. ಆರೋಪಿ ನನಗೆ ಗೊತ್ತು.

ನಾವು ದಿನಾಂಕ: 19.07.2016 ರಂದು ದೇವರ ದರ್ಶನಕ್ಕಾಗಿ ಕನಗರ ದಿಂದ ಗಾಣಗಾಪೂರಕ್ಕೆ ಹೋಗುತ್ತಿದ್ದೆವು. ನಾವು ಕ್ರೂಜರನಲ್ಲಿ ಹೋಗುತ್ತಿದ್ದೆವು, ಅಪಘಾತವು ಡೋಗಿನಾಲಾದ ಹತ್ತಿರ ಆಗಿರುತ್ತದೆ. ನಮ್ಮ ಕ್ರೂಜರ ಚಾಸಾ-28 ರವರು ಚಲಾಯಿಸುತ್ತಿದ್ದರು. ಎಂ.ಹೆಚ್.12-7368 ಎಂಬ ಲಾರಿಯು ವೇಗವಾಗಿ ಅಡ್ಡಾದಿಡ್ಡಿಯಾಗಿ ಬಂದು ನಮಗೆ ಡಿಕ್ಕಿಪಡಿಸಿರುತ್ತದೆ. ಸದರಿ ಅಪಘಾತದಲ್ಲಿ ನಮ್ಮ ಕ್ರೂಜರನಲ್ಲಿರುವ 9 ಜನರು ಮೃತಪಟ್ಟಿರುತ್ತಾರೆ. ಉಳಿದ 13-14 ಜನರು ಇದ್ದರು. ಸದರಿ ಅಪಘಾತದಲ್ಲಿ ನನಗೆ ತಲೆಗೆ, ಕೈಗೆ ಮತ್ತು ಕಾಲಿಗೆ ಗಾಯವಾಗಿರುತ್ತದೆ. ಸದರಿ ಅಪಘಾತದ ನಂತರ ನನನ್ನು ಕಲಬುರಗಿ ಆಸ್ಪತ್ರೆಗೆ ಕರೆದುಕೊಂಡು ಹೋದರು, ಎಷ್ಟು ಜನರನ್ನು ಕರೆದುಕೊಂಡು ಹೋದರು ಎಂದು ನನಗೆ ನೆನಪಿಲ್ಲ ಏಕೆಂಧರೆ ನನಗೆ ತಲೆಗೆ ಗಾಯವಾಗಿ ಮೂರ್ಛೆ ಹೋಗಿದ್ದೆ. ಎದುರುಗಡೆಯ ಲಾರಿಯನ್ನು ಸಂಜಯ ಸಿಂಗೆ ಆರೋಪಿ ಚಲಾಯಿಸುತ್ತಿದ್ದನು, ಅವರನ್ನು ನೋಡಿದರೆ ಗುರುತಿಸುತ್ತೇನೆ. ನಾನು ಆರೋಪಿತನನ್ನು ಆಳಂದ ಪೊಲೀಸ್ ಠಾಣೆಯಲ್ಲಿ ನೋಡಿದ್ದೇನೆ, ಆತ ಈ ದಿನ ನ್ಯಾಯಾಲಯದ ಸಮಕ್ಷಮ ಹಾಜರಿರುತ್ತಾನೆ. ಸದರಿ ಅಪಘಾತವು ಲಾರಿಯ ಚಾಲಕನ ತಪ್ಪಿನಿಂದ ಆಗಿದೆ.

## ಪಾಟೀ ಸವಾಲು ಆರೋಪಿ ಪರ ಶ್ರೀ ಆರ್.ಜೆ.ಪಿ. ವಕೀಲರಿಂದ

ನಾನು ಕ್ರೂಜರನ ಚಾಲಕನ ಬದಿಯ ಸೀಟಿನಲ್ಲಿ ಕುಳಿತಿದ್ದೆ. ನಾನು ಕುಳಿತಲ್ಲಿಂದ ಮುಂದಿನ ರಸ್ತೆ ಕಾಣುತ್ತಿತ್ತು. ಎದುರುಗಡೆಯ ಲಾರಿ ಎಷ್ಟು ದೂರದಿಂದ ನನಗೆ ಕಂಡಿತು ಎಂದು ನನಗೆ ನೆನಪಿಲ್ಲ.

ಎದರುಗಡೆಯಿಂದ ಅಡ್ಡಾದಿಡ್ಡಿಯಾಗಿ ಲಾರಿ ಬರುತ್ತಿರುವುದನ್ನು ನೋಡಿ ನಾನು ನಮ್ಮ ಚಾಲಕನಿಗೆ ನಮ್ಮ ವಾಹನವನ್ನು ಪಕ್ಕಕ್ಕೆ ತೆಗೆದುಕೊಳ್ಳುವಂತೆನೂ ಹೇಳಿಲ್ಲ. ಸದರಿ ರಸ್ತೆ ಪೂರ್ವ-ಪಶ್ಚಿಮವಾಗಿದ್ದೆಯೋ ಉತ್ತರ-ದಕ್ಷಿಣ ಆಗಿದೆಯೋ ನನಗೆ ನೆನಪಿಲ್ಲ. ಸದರಿ ಡೋಗಿ ನಾಲಾದ ಎರಡು ಬದಿಯಲ್ಲಿ ಬೆಟ್ಟಗಳು ಇವೆ, ಮಧ್ಯದಲ್ಲಿ ಒಂದು ಸೇತುವೆ ಇದೆ, ಸೇತುವೆ ದಾಟಿ ಹೋಗಬೇಕಾಗುತ್ತದೆ ಎಂದರೆ ಸರಿ. ಎದುರುಗಡೆಯಿಂದ ಬರುವಾಗ ಎಲ್ ಆಕಾರದಲ್ಲಿ ತಿರುವು ಇದ್ದು, ಲಾರಿಯು ಎಲ್ ಆಕಾರದಲ್ಲಿ ತಿರುಗಿ ಬರುತ್ತಿತ್ತು ಎಂದರೆ ಸರಿ. ಅದು ಎಲ್ ಆಕಾರದ ತಿರುವು ಆಗಿರುವುದರಿಂದ ಅಲ್ಲಿ ವಾಹನಗಳು ನಿಧಾನವಾಗಿ ಚಲಿಸುತ್ತವೆ ಎಂದರೆ ನನಗೆ ನೆನಪಿಲ್ಲ.

ಬರುವ ಲಾರಿ ರಸ್ತೆಯ ಯಾವ ಬದಿಗೆ ಇತ್ತು ಎಂದರೆ ನನಗೆ ನೆನಪಿಲ್ಲ. ಸದರಿ ರಸ್ತೆಯ ಮೇಲೆ ರಸ್ತೆ ವಿಭಜಕ ಇಲ್ಲ ಎಂಧರೆ ನನಗೆ ನೆನಪಿಲ್ಲ. ಅಪಘಾತದ ಎರಡು ದಿನಗಳ ನಂತರ ನನಗೆ ಕಲಬುರಗಿ ಆಸ್ಪತ್ರೆಯಲ್ಲಿ ಪ್ರಜ್ಞೆ ಬಂದಿರುತ್ತದೆ. ಅದಕ್ಕಿಂತ ಮುಂಚೆ ಏನಾಯಿತು ಎಂದು ನನಗೆ ನೆನಪಿಲ್ಲ ಎಂದರೆ ಸರಿ. ನಾನು ಸದರಿ ಘಟನೆ ಆದ 5 ದಿನಗಳ ನಂತರ ಚಾಲಕನನ್ನು ನೋಡಿರುತ್ತೇನೆ, ಅದಕ್ಕಿಂತ ಮುಂಚೆ ಆತನನ್ನು ನಾನು ನೋಡಿಲ್ಲ. ಸದರಿ ವಾಹನದ ನಂಬರ್ ಇಂಗ್ಲಿಷ್ ನಲ್ಲಿ ಬರೆಯಲಾಗಿತ್ತು. ಘಟನೆಯಾಗುವ ಎಷ್ಟು ಹೊತ್ತು ಮುಂಚೆ ನಾನು ನಂಬರ್ ಫಲಕ ನೋಡಿರುತ್ತೇನೆ ಎಂದು ಹೇಳಲು ಬರುವುದಿಲ್ಲ. ಸದರಿ ವಾಹನದಲ್ಲಿ ಎಲ್ಲರೂ ಸೇರಿ 13-14 ಜನ ಇದ್ದೆವು. ಸದರಿ ವಾಹನದಲ್ಲಿ ಎಷ್ಟು ಜನ ಕುಳಿತುಕೊಳ್ಳಬಹುದು ಎಂದು ನನಗೆ ಗೊತ್ತಿಲ್ಲ. ಸದರಿ ವಾಹನದಲ್ಲಿ ಅವಶ್ಯಕತೆಗಿಂತ ಎರಡುಪಟ್ಟು ಜನರು ಇದ್ದರು ಹಾಗಾಗಿ ಚಾಲಕನ ಆಯ ತಪ್ಪಿ ಆತನು ಎದುರುಗಡೆಯ ವಾಹನಕ್ಕೆ ಡಿಕ್ಕಿಪಡಿಸಿರುತ್ತಾನೆ ಎಂದರೆ ಸರಿ ಅಲ್ಲ.

ಎದುರುಗಡೆ ವಾಹನ ಅಡ್ಡಾದಿಡ್ಡಿಯಾಗಿ ವೇಗವಾಗಿ ಬರುತ್ತಿತ್ತು ಎಂದು ನಾನು ಹೇಳುತ್ತಿರುವುದು ಸುಳ್ಳು ಎಂಧರೆ ಸರಿ ಅಲ್ಲ. ಎಲ್ ಆಕಾರದಲ್ಲಿ ತಿರುವು ಇರುವುದರಿಂದ ವಾಹನವು ಎದುರುಗಡೆಯಿಂದ ನಿಧಾನವಾಗಿ ಬರುತ್ತಿತ್ತು ಎಂದರೆ ಸರಿ ಅಲ್ಲ. ಪರಿಹಾರಕ್ಕಾಗಿ ನಾವು ಉಸ್ಮಾನಾಬಾದ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಿರುತ್ತೇವೆ ಎಂದರೆ ನನಗೆ ಗೊತ್ತಿಲ್ಲ. ಚಾಲಕನ ತಪ್ಪಿನಿಂದ ಈ ಅಪಘಾತ ಆಗಿಲ್ಲ ಎಂಧರೆ ಸರಿ ಅಲ್ಲ. ಪರಿಹಾರ ಪಡೆಯುವ ಉದ್ದೇಶಕ್ಕಾಗಿ ಸದರಿ ಪ್ರಕರಣವನ್ನು ದಾಖಲಿಸಿದ್ದೇವೆ ಎಂದರೆ ಸರಿ ಅಲ್ಲ.

(ಸಾಕ್ಷಿಯು ಹಿಂದಿಯಲ್ಲಿ ತನ್ನ ಸಾಕ್ಷ್ಯ ನುಡಿದಿರುವುದರಿಂದ, ಉಭಯ ವಕೀಲರಿಗೂ ಸಹ ಹಿಂದಿ ಭಾಷೆ ಅರ್ಥವಾಗುವುದರಿಂದ ಮತ್ತು ನ್ಯಾಯಾಧೀಶರಿಗೂ ಸಹ ಹಿಂದಿ ಭಾಷೆ ಅರ್ಥವಾಗುವುದರಿಂದ ಅವರ ಸಾಕ್ಷ್ಯವನ್ನು ಕನ್ನಡದಲ್ಲಿ ಬರೆದುಕೊಳ್ಳಲಾಯಿತು).
ಮರುವಿಚಾರಣೆ: ಇರುವುದಿಲ್ಲ.

ಓ.ಹೇ.ಕೇ.ಸರಿ ಇದೆ.

ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ,ಆಳಂದ